**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿಸಿ ಸಂಖ್ಯೆ : 75/2025**

**ಚಾ.ಸಾಃ 03, ಫ್ರಾ.ಸಾಃ 02**

| | |
|---|---|
| ಸಾಕ್ಷಿದಾರನ ಹೆಸರು | ಪ್ರಶಾಂತ ನಾಯ್ಕ |
| ತಂದೆಯ ಹೆಸರು | ಉಲ್ಲಾಸ ನಾಯ್ಕ |
| ವಯಸ್ಸು | 25 ವರ್ಷಗಳು |
| ಉದ್ಯೋಗ | ಗ್ರಾಮ ಸಹಾಯಕ, ಜಲವಳ್ಳಿಪಂಚಾಯತ |
| ವಾಸ್ತವ್ಯ | ಕೆರವಳ್ಳಿ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 29-01-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿರುತ್ತೇನೆ.

ದಿನಾಂಕಃ 08-04-2025 ರಂದು ಸಂಜೆ 06-40ರ ಸಮಯಕ್ಕೆ ನಾನು ತಾಲೂಕು ಕಚೇರಿಯಲ್ಲಿ ಇದ್ದಾಗ ಅಬಕಾರಿ ಪೋಲೀಸರು ಕಚೇರಿಗೆ ಬಂದು ಪಡುಕುಳಿ ಗ್ರಾಮದಲ್ಲಿ ಮಹಿಳೆಯರು ಮದ್ಯ ಮಾರಾಟದ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದು ಅದರಂತೆ ದಾಳಿ ಮಾಡಲು ಬಂದಿದ್ದು ಸದರಿ ವಿಚಾರವನ್ನು ಚಾಸಾ-2ರವರಿಗೆ ತಿಳಿಸಿದ್ದು ದಾಳಿಗೆ ಹೋಗಬೇಕು ಅಂತ ಚಾಸಾ-2ರವರು ನನ್ನನ್ನು ಕರೆದಿರುತ್ತಾರೆ. ಅದರಂತೆ ನಾನು ಚಾಸಾ-2 ಮತ್ತು ಅಬಕಾರ ಪೋಲೀಸರ ಜೊತೆಯಲ್ಲಿ ಹೋಗಿರುತ್ತೇನೆ. ಅದರಂತೆ ಕಚೇರಿಯಿಂದ ಹೊರಟು ರಾತ್ರಿ 07-15ರ ವೇಳೆಗೆ ಪಡುಕುಳಿ ಗ್ರಾಮಕ್ಕೆ ಹೋಗಿದ್ದು ಪೋಲೀಸರು ಅಲ್ಲಿ ವೀಣಾ ಗೋಪಾಲ ಗೌಡ ಎಂಬುವವರ ಮನೆಯ ಹತ್ತಿರ ಕರೆದುಕೊಂಡು ಹೋದರು. ಅದರಂತೆ ಸದರಿ ಮನೆಗೆ ಹೋದಾಗ ಆರೋಪಿ ಮನೆಯಲ್ಲಿ ಇದ್ದು, ಅವರ ಯಜಮಾನರು ಮನೆಯಲ್ಲಿ ಇರಲಿಲ್ಲ. ಪೋಲಿಸರು ಕೇಳಲಾಗಿ ಆಕೆ ತಾನು ಯಾವುದೇ ಮದ್ಯ ಮಾರಾಟ ಮಾಡುವುದಿಲ್ಲ ಎಂದು ಹೇಳಿದರು. ಪೋಲೀಸರು ಮನೆಯನ್ನು ಜಪ್ತು ಮಾಡಬೇಕು ಎಂದಾಗ ಅವರು ಒಪ್ಪಿಕೊಂಡರು. ಆ ಸಮಯದಲ್ಲಿ ಪೋಲೀಸರು ಒಂದು ಶೋಧನಾ ವರದಿಗೆ ಸಹಿ ತೆಗೆದುಕೊಂಡಿರುತ್ತಾರೆ. ಈಗ ಅದನ್ನು ನೋಡುತ್ತಿದ್ದು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪೋಲೀಸರು ಆರೋಪಿಯ ಮನೆಯ ಒಳಗೆ ಶೋಧನೆ ಮಾಡಿದಾಗ ಮನೆಯ ಒಳಗೆ ಒಂದು ಮೂಲೆಯಲ್ಲಿ ಒಂದು ರಟ್ಟಿನ ಬಾಕ್ಸ ಮತ್ತು ನೀಲಿ ಬಣ್ಣದ ಚೀಲಗಳಲ್ಲಿ ಮದ್ಯಗಳು ಇದ್ದವು. ಅಬಕಾರಿ ಪೋಲಿಸರು ಅವುಗಳನ್ನು ತೆಗೆದು ನೋಡಿದಾಗ ರಟ್ಟಿನ ಬಾಕ್ಸನಲ್ಲಿ 39 ಟೆಟ್ರಾ ಪ್ಯಾಕಗಳು ಇದ್ದವು. ನೀಲಿ ಚೀಲದಲ್ಲಿ ಸುಮಾರು 5 ಬಿಯರ್ ಬಾಟಲಿಗಳು, ಕೆಂಪು ಚೀಲದಲ್ಲಿ 5 ಬಿಯರ್ ಟಿನಗಳು ಇದ್ದವು. ಅಬಕಾರಿ ಪೋಲಪೀಸರು ಅವುಗಳನ್ನು ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡು, ಪಂಚನಾಮೆ ಮಾಡಿ ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದು ಒಂದು ಕಚ್ಚಾ ನಕಾಶೆ ತಯಾರಿಸಿರುತ್ತಾರೆ. ನಾನು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ.

ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ಅದನ್ನು ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಗಿದೆ. ಅಮಾನತ್ತುಪಡಿಸಿಕೊಂಡ ಮದ್ಯಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-4 ರಲ್ಲಿರುವ ಪೌಚುಗಳನ್ನು ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಮುಮಾ-1 ಮತ್ತು 2 ರಲ್ಲಿರುವ ಟೆಟ್ರಾ ಪ್ಯಾಕಗಳನ್ನು ಮತ್ತು ಬಿಯರ್ ಬಾಟಲಿಗಳನ್ನು ಮತ್ತು ಟಿನಗಳನ್ನು ನೋಡಿ ಗುರುತಿಸಿರುತ್ತಾರೆ. ಮುಮಾ-1 ಮತ್ತು 2 ರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ಮುಮಾ-1(ಬಿ) ಮತ್ತು 2(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಕಂದಾಯ ನಿರೀಕ್ಷಕರು ದಾಳಿಗೆ ಹೋಗಲು ಕರೆದಿದ್ದರಿಂದ ನಾನು ಹೋಗಿರುತ್ತೇನೆ. ಪಡುಕುಳಿ ಗ್ರಾಮದ ಬಗ್ಗೆ ನನಗೆ ಮಾಹಿತಿ ಇದೆ. ಆರೋಪಿಯ ಮನೆಯನ್ನು ನಾನು ಮೊದಲಿನಿಂದಲೂ ನೋಡಿರುತ್ತೇನೆ. ಆರೋಪಿಯ ಮನೆಯ ಅಕ್ಕಪಕ್ಕ ಸುಮಾರು 10 ಮನೆಗಳು ಇದೆ. ಆರೋಪಿಯ ಮನೆಯ ಹತ್ತಿರ ಬೇರೆಯವರ ಯಾವುದೇ ಅಂಗಡಿಗಳು ಇಲ್ಲ. ದಾಳಿಗೆ ಹೋಗುವ ಪೂರ್ವದಲ್ಲಿ ಅಬಕಾರಿ ಪೋಲೀಸರು ನಿಖರವಾಗಿ ಆರೋಪಿ ಮನೆಗೆ ಹೋಗಬೇಕು ಎಂದು ಹೇಳಲಿಲ್ಲ, ನೇರವಾಗಿ ಆರೋಪಿಯ ಮನೆಯ ಎದುರಿಗೆ ಹೋಗಿ ಗಾಡಿ ನಿಲ್ಲಿಸಿರುತ್ತಾರೆ. ನಾವು ಆರೋಪಿಯ ಮನೆಗೆ ಹೋದಾಗ ಮನೆಯಿಂದ ಆಚೆ ಬಹಳಷ್ಟು ಜನ ಗಂಡಸರು, ಹೆಂಗಸರು ಸೇರಿದ್ದರು. ಆರೋಪಿಯ ಮನೆಯ ಒಳಕ್ಕೆ ಮೊದಲು ಅಬಕಾರಿ ನಿರೀಕ್ಷಕರು ಹೋಗಿರುತ್ತಾರೆ. ಅವರು ಮೊದಲು ಮನೆಯ ಒಳಗೆ ಹೋದಾಗ ನಾನು ಮತ್ತು ಚಾಸಾ-2 ಮನೆಯ ಹೊರಗೆ ನಿಂತಿದ್ದೆವು. ನಂತರ ನಾವೂ ಸಹ ಮನೆಯ ಒಳಗೆ ಹೋಗಿರುತ್ತೇವೆ. ಆರೋಪಿಯ ಮನೆಯಲ್ಲಿ 3-4 ಕೋಣೆಗಳು ಇವೆ. ಅಬಕಾರಿ ಪೋಲೀಸರು ಆರೋಪಿಯ ಮನೆಯ ಎಲ್ಲಾ ಕೋಣೆಗಳನ್ನು ಶೋಧಿಸಿರುತ್ತಾರೆ. ಮನೆಯ ಒಳಗಿನಿಂದ ಮನೆಯ ಹೊರಕ್ಕೆ ಮದ್ಯವನ್ನು ಅಬಕಾರಿ ಪೋಲೀಸರು ತೆಗೆದುಕೊಂಡು ಬಂದಿರುತ್ತಾರೆ. ಮದ್ಯವು ಆರೋಪಿಯ ಮನೆಯ ಬೇರೆ ಬೇರೆ 2-3 ಕೊಠಡಿಗಳಲ್ಲಿ ಇದ್ದವು. ಅಬಕಾರಿ ನಿರೀಕ್ಷಕರು ಅವುಗಳೆಲ್ಲವನ್ನೂ ಒಟ್ಟುಗೂಡಿಸಿ ತೆಗೆದುಕೊಂಡು ಬಂದಿರುತ್ತಾರೆ. ಅವುಗಳನ್ನು ಮನೆಯ ಅಂಗಳದಲ್ಲಿ ಇಟ್ಟು ಲೆಕ್ಕ ಮಾಡಿ ಫೋಟೋ ತೆಗೆದಿರುತ್ತಾರೆ. ಅದೇ ಕಾಲಕ್ಕೆ ಅಬಕಾರಿ ಪೋಲೀಸರು ಪಂಚನಾಮೆ ಮಾಡಿದ್ದು ಅಲ್ಲಿಯೇ ಸಹಿ ಹಾಕಿರುತ್ತೇನೆ. ಮರುದಿನ ಅಬಕಾರಿ ಪೋಲೀಸರು ತಾಲೂಕು ಕಚೇರಿಗೆ ಬಂದಿದ್ದು ಅಲ್ಲಿಯೂ ಕೆಲವು ದಾಖಲೆಗಳಿಗೆ ಸಹಿ ತೆಗೆದುಕೊಂಡಿರುತ್ತಾರೆ. ಇದೇ ರೀತಿ ಪಂಚನಾಮೆ ಬರೆಯಬೇಕು ಎಂದು ನಾನು ಮಾಹಿತಿ ನೀಡಿಲ್ಲ. ಪಂಚನಾಮೆಯಲ್ಲಿ ಬರೆದಿರುವುದನ್ನು ನಿಖರವಾಗಿ ಹೇಳಲಾಗುವುದಿಲ್ಲ.

**ಚಾ.ಸಾಃ 3, ಪ್ರಾ.ಸಾಃ 2**

ಪಂಚನಾಮೆಯಲ್ಲಿ ಚೆಕಬಂದಿಯನ್ನು ಬರೆದಿದ್ದಾರೋ ಇಲ್ಲವೋ ನನಗೆ ನೆನಪಿಲ್ಲ. ಸ್ಥಳದಲ್ಲಿ 3 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ, ಅವುಗಳಲ್ಲಿ ಒಂದು ಪಂಚನಾಮೆ, ಉಳಿದ ದಾಖಲೆಗಳ ಹೆಸರು ನನಗೆ ಗೊತ್ತಿಲ್ಲ. ಅಬಕಾರಿ ನಿರೀಕ್ಷಕರು ನನ್ನ ಮುಂದೆ ಸಾರ್ವಜನಿಕರಿಗೆ ಪಂಚರಾಗಿ ಸಹಕರಿಸುವಂತೆ ಕೇಳಲಿಲ್ಲ. ನಾನು ಹೇಳಿರುವಂತೆ ಆರೋಪಿಯು ವಾಸವಾಗಿದ್ದ ಮನೆಗೆ ಅಬಕಾರಿ ಪೋಲೀಸರು ಯಾವತ್ತೂ ದಾಳಿ ಮಾಡೇ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆಯಿಂದ ಯಾವುದೇ ಮಧ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅಬಕಾರಿ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**